ಶ್ರೀ ಎಂ. ನಂಜೇಗೌಡ.—ಅದಕ್ಕೆ ಕಾರಣವಾದರೂ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಾನಾ ಕಾರಣಗಳುಂಟು. ಒಂದನೇ ಕಾರಣ ತಾವು ಕೇಳುತ್ತಿರುವ ಒಡ್ಡು ವಾಣೀವಿಲಾಸ ಸಾಗರದ ಮೇಲ್ಮಟ್ಟದಲ್ಲಿದ್ದು ಇದನ್ನು ಕಟ್ಟಿದರೆ ಈ ವಾಣೀವಿಲಾಸ ಸಾಗರಕ್ಕೆ ನೀರಿಗೆ ತೊಂದರೆ ಆದೀತೇನೋ ಎಂಬುದು ಮೊದಲನೇ ಕಾರಣ ಇನ್ನು ಎರಡನೆಯದು—ಇಲ್ಲಿ ಈ ಕಾಮಗಾರಿಯನ್ನು ಕೈಗೊಂಡು ಜಮೀನನ್ನು ನೀರಾವರಿಗೆ ತಂದರೆ ಅಲ್ಲಿ ಒಂದು ಎಕರೆಗೆ 3000 ರೂಪಾಯಿ ಮೇಲೆ ಖರ್ಚುಬರುತ್ತದೆ. ಇದು ಬಹಳ ದುಬಾರಿ ಆಯಿತು.

ಶ್ರೀ ಎಂ. ನಂಜೇಗೌಡ.—ನೀರನ್ನು ಅಳತೆಮಾಡುವಾಗ ಹೊರಗಿನ ಜನರ ಕೈವಾಡ ನಡೆದಿದೆ ಎಂಬುದಾಗಿ ಜನರು ಅಭಿಪ್ರಾಯ ಪಡುತ್ತಿದ್ದಾರೆ. ಆದುದರಿಂದ ಪುನಃ ಪರಿಶೀಲಿಸಿ ಸಾಕಷ್ಟು ನೀರು ಬರುವುದೇ ಎಂಬುದನ್ನು ತಿಳಿದುಕೊಳ್ಳುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆ ಸರಿಯಾಗಿ ಅರ್ಥವಾಗಲಿಲ್ಲ.

ಶ್ರೀ ಎಂ. ನಂಜೇಗೌಡ.—ಆ ಹಳ್ಳದ ನೀರಿನ ಬಗ್ಗೆ ಗೇಜಿಂಗ್ ಮಾಡುವಾಗ ಅಧಿಕಾರಿಗಳ ಮೇಲೆ ಹೊರಗಿನವರು ಕೈವಾಡ ನಡೆಸಿದ್ದಾರೆಂಬ ಅಭಿಪ್ರಾಯವಿದೆ. ಆದುದರಿಂದ ಪುನಃ ನೀರಿನ ಅಳತೆ ಮಾಡಿನೋಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೇಜಿಂಗ್ ಮಾಡುವುದು ನೀರು ಹರಿಯುವುದು ತಿಳಿಯುವುದಕ್ಕೆ. ಈಗ ವರದಿ ಬಂದಿರುವ ಪ್ರಕಾರ ಸಾಕಷ್ಟು ನೀರು ಸಿಕ್ಕುವುದಿಲ್ಲವೆಂದು ತಿಳಿದು ಬಂದಿದೆ. ಅಷ್ಟು ಅನುಮಾನ ಪಡಬೇಕಾದ ಅವಶ್ಯಕತೆ ಇಲ್ಲ. ಒಂದುವೇಳೆ ಪುನರ್ಪರಿಶೀಲನೆ ಮಾಡಬೇಕೆಂದರೆ ಅಡ್ಡಿಯಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಬರಗಾಲ ಪ್ರದೇಶದಲ್ಲಿ ಈ ಯೋಜನೆ ಇದೆ. ನೀರು ಕಡಮೆ ಬಂದರೆ ಆದಕ್ಕೆ ತಕ್ಕಂತೆ ಒಂದು ಚಿಕ್ಕ ಕಟ್ಟೆಯನ್ನಾದರೂ ಹಾಕುವಿರಾ ? ದೂರದಲ್ಲಿರುವ ಕಟ್ಟೆಗೆ ನೀರು ಸಾಕಾಗುವುದಿಲ್ಲವೆಂದು ಹೇಳಿದರೆ ಮೇಲುಗಡೆ ಇರುವ ಜನರೇನು ಮಾಡಬೇಕು ? ಅವರಿಗೆ ಅನುಕೂಲ ಬೇಡವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಿಲ್ಲದಿದ್ದರೆ ಕಟ್ಟೆ ಹೇಗೆ ಕಟ್ಟುವುದಕ್ಕೆ ಸಾಧ್ಯ ?

Accommodation in Shikaripur and Shiralkoppa High Schools

503. Sri K. YENKATAPPA(Shikaripur).—

Will the Minister for education be pleased to state:—

(*a*) the stength of students in the Shikaripur, Shiralkoppa Municipal High Schools taken over by Government and whether there is sufficient accommodation proportionate to this strength;

(*b*) whether it is not a fact that the Ex-Municipality had paid money to Government for extending the buildings in the accommodation is insufficient;

(*c*) if so, when the money was paid and reason for such a long delay;

(*d*) whether orders will be issued for taking up the programme during this year only;

(*e*) whether it has come to the notice of the Government that the repair works of these Schools have come to standstill; if so, whether the repair works will be got done expeditiously?

Sri A. R. BADRIANARAYANA (Minister for Education) —

(*a*) The stength of students in Shikaripur and Shiralkoppa High Schools is 829. There is no sufficient accommodation proportionate to the strength.

(*b*) It is learnt that the Shikaripur Municipality has credited a sum of Rs. 13,135 to the P. W. D. The Shiralkoppa Municipality has not made any credit so far.

(*c*) The delay is due to the following reasons :

(1) Shortage of Money credited by the shikaripur Municipality on 18-12-1959.

(2) Non-crediting of any money by the Shiralkoppa Municipality.

(3) For not taking up suitable steps in construction of School buildings by the Municipalites.

(*d*) and (*e*) Under consideration.

ಶ್ರೀ ಕೆ. ಯಂಕಟಪ್ಪ.—1959ರಲ್ಲಿ ಶಿಕಾರಿಪುರ ಮುನಿಸಿಪಾಲಿಟಿಯವರು 13135 ರೂಪಾಯಿಗಳನ್ನು ಪಿಡಬ್ಲ್ಯೂಗೆ ಜಮ ಮಾಡಿದ್ದರೂ ಕೂಡ ಇದುವರೆಗೆ ಸರಕಾರ ಈ ವಿಚಾರದಲ್ಲಿ ಗಮನ ಕೊಡದಿರಲು ಕಾರಣವೇನು ?

† ಶ್ರೀ ಎ. ಆರ್. ಬದರಿನಾರಾಯಣ.—ಮುನಿಸಿಪಾಲಿಟಿ ಹಣ ಡಿಪಾಜಿಟ್ ಮಾಡುವುದು 1959 ರಲ್ಲಿ, ಹ್ಯಾಂಡೋವರ್ ಮಾಡಿರುವುದು 1971ರಲ್ಲಿ. ಚೇಕಿಂಗ್ ಒವರ್ ಆಗಿಲ್ಲ. ಅದಿನ್ನು ಪ್ರೊಸ್‌ಸನಲ್ಲಿದೆ. ಸರಕಾರದ ಸ್ವಾಧೀನಕ್ಕೆ ಬರುವವರೆಗೆ ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—1959ರಲ್ಲಿ ಎಷ್ಟು ಅಂದಾಜಾಗಿತ್ತೋ ಅದರ ಪ್ರಕಾರ ಮುನಿಸಿಪಾಲಿಟಿಯವರು ಹಣ ಡಿಪಾಜಿಟ್ ಮಾಡಿದ್ದಾರೆ. ಸರಕಾರದಿಂದ ಕ್ರಮ ತೆಗೆದುಕೊಳ್ಳುವುದು ತಡವಾಗಿದೆ. ಹೆಚ್ಚು ಹಣ ಕೊಡಬೇಕಾಗಿಲ್ಲ. ಈ ವರ್ಷವಾದರೂ ಏನ್ರಣ ಕೆಲಸ ಕೈಕೊಳ್ಳುವಿರಾ !

ಶ್ರೀ ಎ. ಆರ್. ಬದರಿನಾರಾಯಣ್.—ಕಟ್ಟಡ ಸ್ವಾಧೀನಕ್ಕೆ ತೆಗೆದುಕೊಂಡ ತಕ್ಷಣ ಕೆಲಸ ಪುರು ಮಾಡುತ್ತೇವೆ.

Inadequate Supply of Medicines to Government Hospitals

513. Sri S. M. SHEERNALY CHANDRASEKHAR (Hosanager).—

Will the Minister for Health be pleased to state:—

(*a*) whether it has come to the notice of Government that there is no adequate supply of medicines in Government Hospitals in the State;

(*b*) the action taken for the adequate supply of medicines in these Hospitals ?